ಹುದ್ದೆಗಳ ಭರ್ತಿ ಬಗ್ಗೆ

೧೯೩೩. ಶ್ರೀ ವಸಂತ ಬಂಗೇರಾ (ಬೆಳ್ತಂಗಡಿ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರು ಹಾಗೂ ಇತರ ಹುದ್ದೆಗಳು ಎಷ್ಟು, ಈ ಹುದ್ದೆಗಳನ್ನು ತುಂಬದಿರಲು ಕಾರಣವೇನು ?

ಆ) ರಾಜ್ಯದ ಇತರ ಕಾಲೇಜು ಹಾಗೂ ಕಿರಿಯ ಕಾಲೇಜುಗಳ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕ್ರಮಕೈಗೊಳ್ಳುವುದು ಯಾವಾಗ ?

ಈ) ಬೆಳ್ತಂಗಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೆಲವು ಉಪನ್ಯಾಸಕರಿಂದ ಹಿಡಿದು ಗುಮಾಸ್ತ ಜವಾನ ಹುದ್ದೆಗಳು ಕೆಲವು ವರ್ಷಗಳಿಂದ ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)—

ಅ) ರಾಜ್ಯದ ಸರ್ಕಾರಿ ಕಿರಿಯ ಕಾಲೇಜುಗಳಿಗೆ ಸಂಬಂಧಿಸಿದಂತೆ ಖಾಲಿ ಇರುವ ಹುದ್ದೆಗಳ ಸಂಖ್ಯೆ ೨೫೭. ಈ ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯ ಮಟ್ಟದ ನೇರನೇಮಕಾತಿ ಸಮಿತಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಹೊಸ ಮೀಸಲಾತಿ ಆದೇಶದನ್ವಯ ಹುದ್ದೆಗಳನ್ನು ವರ್ಗೀಕರಿಸಬೇಕಾಗಿರುವುದರಿಂದ ಪರಿಶೀಲಿಸಲಾಗುತ್ತಿದೆ.

ಆ) ಮೇಲಿನಂತೆ.

ಇ) ಆದಷ್ಟು ಜಾಗ್ರತೆಯಾಗಿ ಭರ್ತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಈ) ಸಂಬಂಧಿಸಿರುವುದಿಲ್ಲ.

ಗುಬ್ಬಿ ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಬಗ್ಗೆ

೧೯೧೬. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ)—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಬ್ಬಿಯಲ್ಲಿ ಪ್ರಥಮದರ್ಜೆ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಯಿತು ? ಕಾಲೇಜನ್ನು ಯಾವ ಸ್ಥಳದಲ್ಲಿ ನಡೆಸಲಾಗುತ್ತಿದೆ ? ಕಛೇರಿ ಮತ್ತು ಗೋದಾಮುಗಳನ್ನು ಮಾಡಲಾಗಿರುವ ಸ್ಥಳಗಳಾವುವು ?

ಆ) ಸಾರ್ವಜನಿಕರು ಹಾಗೂ ಪುರಸಭೆಯವರು ಕಾಲೇಜು ಕಟ್ಟಡಕ್ಕಾಗಿ ಒಂದು ಲಕ್ಷ ರೂ. ಗಳನ್ನು ಪಂತಿಕೆ ಸಂಗ್ರಹಿಸಿ ಸರ್ಕಾರದ ವಶಕ್ಕೆ ಕೊಟ್ಟಿರುವುದು ನಿಜವೆ ?

ಇ) ೧) ತಾತ್ಕಾಲಿಕವಾಗಿ ಸದರಿ ಹಳ್ಳದಿಂದ ಜೂನಿಯರ್ ಕಾಲೇಜು ಮೈದಾನದ ಉತ್ತರ ಭಾಗದಲ್ಲಿ ಮೂರು ಕೊಠಡಿಗಳನ್ನು ಕಟ್ಟಿಸಿಕೊಟ್ಟರೆ ಸದ್ಯದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದೆಂದು ಕ್ಷೇತ್ರದ ಶಾಸಕರು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಂದ ಮನವಿ ಸಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಶಾಶ್ವತವಾದ ಕಟ್ಟಡವನ್ನು ಕಟ್ಟಿಸುವುದು ಯಾವಾಗ ? (ವಿವರ ನೀಡುವುದು)

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು)—

ಅ) ದಿನಾಂಕ ೧೨-೮-೧೯೮೩ರಂದು ಪ್ರಾರಂಭಿಸಲಾಯಿತು. ತರಗತಿಗಳನ್ನು ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ನಡೆಸಲಾಗುತ್ತಿದೆ.

ಅ) ಹೌದು.

ಇ) (೧) ಇದರ ಬಗ್ಗೆ ಪ್ರಸ್ತಾವನೆ ತರಿಸಿಕೊಂಡು ಪರಿಶೀಲಿಸಲಾಗುವುದು.

(೨) ಈಗಾಗಲೇ ಗುಬ್ಬಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಿಸಲು ಸೂಕ್ತ ನಿವೇಶನ ಮಂಜೂರು ಮಾಡಲು ತುಮಕೂರು ಜಿಲ್ಲಾಧಿಕಾರಿಯವರನ್ನು ಕೋರಿದೆ ರಾಜ್ಯದಲ್ಲಿ ಅನೇಕ ಪ್ರದೇಶಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ತರಗತಿಗಳನ್ನು ಸರದಿಯ ಮೇಲೆ ಕಿರಿಯ ಕಾಲೇಜುಗಳಲ್ಲೂ ಹಾಗೂ ಪ್ರೌಢ ಶಾಲೆಗಳಲ್ಲಿ ನಡೆಸಲಾಗುತ್ತಿದೆ. ನಿವೇಶನ ಮಂಜೂರಾದ ನಂತರ ಹಣ ಒದಗಿಸಿ ಸ್ವತಂತ್ರ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆಯಲ್ಲಿ ಪ್ರಥಮ ದರ್ಜೆಗೆ ಕಾಲೇಜು ಕಟ್ಟಡವನ್ನು ಒದಗಿಸುವುದು ಕುರಿತು

೧೯೩೭. ಶ್ರೀ ಎಂ. ಶಿವಣ್ಣ (ಹೆಗಡದೇವನಕೋಟೆ)—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಪ್ರಥಮ ದರ್ಜೆ ಕಾಲೇಜು ಸ್ವಂತ ಕಟ್ಟಡದಲ್ಲಿ ನಡೆಯುತ್ತಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ, ಸದರಿ ಕಾಲೇಜಿಗೆ ಸ್ವಂತ ಕಟ್ಟಡವನ್ನು ಕಟ್ಟಲು ಸರ್ಕಾರದವರ ಉದ್ದೇಶವಿದೆಯೇ ?

ಇ) ಹಾಗಿದಲ್ಲಿ, ಉದ್ದೇಶಿಸಿರುವ ಅಂದಾಜು ವೆಚ್ಚ ಎಷ್ಟು ?

ಈ) ೧೯೮೭–೮೮ನೇ ಸಾಲಿನಲ್ಲಿ ಹಣ ಒದಗಿಸಲಾಗಿತ್ತೆ ? ಒದಗಿಸಿದ್ದಲ್ಲಿ ಸರ್ಕಾರದವರು ಕ್ರಮವ ಕೈಗೊಂಡಿರುವರೇ ?

ಉ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು)—

ಅ) ಇಲ್ಲ.

ಆ) ಇದೆ.

ಇ) ಕಾಲೇಜು ಕಟ್ಟಡಕ್ಕೆ ರೂ ೩೫ ಲಕ್ಷಗಳ ನಕ್ಷೆ ಮತ್ತು ಅಂದಾಜನ್ನು ತಯಾರಿಸಿದೆ.

ಈ) ೧೯೮೭–೮೮ನೇ ಸಾಲಿನ ಮುಂಗಡ ಪತ್ರದಲ್ಲಿ ಈ ಬಾಬಿಗಾಗಿ ರೂ. ೨ ಲಕ್ಷ ಹಣ ಒದಗಿಸಲಾಗಿತ್ತು ಕಾಲೇಜಿಗಾಗಿ ಸೂಕ್ತ ನಿವೇಶನ ಹೊಂದಲು ಕ್ರಮ ತೆಗೆದುಕೊಳ್ಳಲಾಗುತ್ತಿತ್ತು ಮತ್ತು ನಕ್ಷೆ ಹಾಗೂ ಅಂದಾಜನ್ನು ಕೊರಲಾಗಿತ್ತು.

ಉ) ಈಗ ಸದರಿ ಕಾಲೇಜಿನ ಕಟ್ಟಡ ನಿರ್ಮಿಸಲು ನಿವೇಶನ ದೊರೆತಿದ್ದು, ಕಟ್ಟಡದ ನಕ್ಷೆ ಮತ್ತು ಅಂದಾಜಿಗೆ ಆಡಳಿತ ಆನುಮೋದನೆ ನೀಡುವುದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ, ಈ ಬಾಬಿಗಾಗಿ ಪ್ರಸಕ್ತ ಸಾಲಿನ ಮುಂಗಡ ಪತ್ರದಲ್ಲಿ ರೂ. ೨ ಲಕ್ಷ ಹಣ ಒದಗಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ ಬಗ್ಗೆ

೧೯೩೮. ಶ್ರೀಮತಿ ಸುಮಾವಸಂತ (ವಿರಾಜ ಪೇಟೆ)—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂಚೆ ಮತ್ತು ತೆರಪಿನ ಸಂಸ್ಥೆ ಪ್ರಾರಂಭವಾದದ್ದು ಯಾವಾಗ ?